## 17. ಜಿಎಸ್‌ಟಿ ನಷ್ಟ: ಶೀಘ್ರ ತೀರ್ಮಾನ

ರಾಜ್ಯಗಳಿಗೆ ಜಿಎಸ್‌ಟಿ ನಷ್ಟವನ್ನು ಯಾವ ರೀತಿ ಭರಿಸಿಕೊಡಬೇಕು ಎಂಬ ಕುರಿತು ಜಿಎಸ್‌ಟಿ ಮಂಡಳಿ ತೀರ್ಮಾನ ಕೈಗೊಳ್ಳುತ್ತದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಬಜೆಟ್ ಪೂರಕ ಬೇಡಿಕೆ ಮೇಲೆ ಲೋಕಸಭೆಯಲ್ಲಿ ನಡೆದ ಚರ್ಚೆಗೆ ಉತ್ತರ ನೀಡಿದ ಅವರು, "ದೇವರು ಸೃಷ್ಟಿಸಿದ ಅಸಾಮಾನ್ಯ ಸನ್ನಿವೇಶದಿಂದ ಆದಾಯ ಕೊರತೆ ಎದುರಾಗಿದೆ. ಆದರೂ ಜಿಎಸ್‌ಟಿ ಮಂಡಳಿ ಈ ಕುರಿತು ಚರ್ಚೆ ನಡೆಸಲಿದೆ. ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವಂತಹ ನಷ್ಟ ಪರಿಹಾರ ಸೂತ್ರವನ್ನು ಮಂಡಳಿ ಸಭೆಯಲ್ಲಿ ಕೈಗೊಳ್ಳಲಾಗುವುದು" ಎಂದು ತಿಳಿಸಿದ್ದಾರೆ.

ಪೂರಕ ಬೇಡಿಕೆಯಲ್ಲಿ ಮಂಡಿಸಲಾಗಿರುವ ಮೊತ್ತದ ಬಹುಭಾಗ ಜನಕೇಂದ್ರಿತ ಯೋಜನೆಗಳಿಗೆ ವೆಚ್ಚವಾಗಲಿದೆ. ಮನ್‌ರೇಗಾ ಯೋಜನೆಗೆ ರೂ.40 ಸಾವಿರ ಕೋಟಿ ನೀಡಲಾಗುತ್ತದೆ. ಬಜೆಟ್‌ನಲ್ಲಿ ಘೋಷಿಸಿದ್ದ ರೂ.61,500 ಕೋಟಿ ಜೊತೆಗೆ ಹೆಚ್ಚುವರಿಯಾಗಿ ಈ ಮೊತ್ತ ನೀಡಲಾಗುವುದು. ಇದರಿಂದ ಇದೇ ಮೊದಲ ಬಾರಿಗೆ ಮನ್‌ರೇಗಾಕ್ಕೆ ರೂ.ಒಂದು ಲಕ್ಷ ಕೋಟಿ ಅನುದಾನ ನೀಡಿದಂತಾಗುತ್ತದೆ. ಪೂರಕ ಬೇಡಿಕೆಯಲ್ಲಿನ ಬಹುಪಾಲನ್ನು ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಯೋಜನೆಗೂ ಮೀಸಲಿಡಲಾಗುವುದು." ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಸದನವು ಧ್ವನಿಮತದ ಮೂಲಕ ರೂ.2.35 ಲಕ್ಷ ಕೋಟಿ ಪೂರಕ ಬೇಡಿಕೆಗಳಿಗೆ ಲೋಕಸಭೆ ಅನುಮೋದನೆ ನೀಡಿತು. ಇದರಲ್ಲಿ ರೂ.1.66 ಲಕ್ಷ ಕೋಟಿ ಕೋವಿಡ್–19 ನಿರ್ವಹಣೆಗೆ ಬಳಕೆಯಾಗಲಿದೆ. ಇದಕ್ಕೂ ಮುನ್ನ ನಡೆದ ಚರ್ಚೆಯಲ್ಲಿ ಭಾಗವಹಿಸಿದ್ದ ಪ್ರತಿಪಕ್ಷ ಮುಖಂಡರು, ದೇಶದ ಆರ್ಥಿಕತೆ ಪಾತಾಳಕ್ಕೆ ಕುಸಿದಿದ್ದರೂ ಅರ್ಥ ವ್ಯವಸ್ಥೆಗೆ ಉತ್ತೇಜನ ನೀಡಲು ಸರ್ಕಾರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಟೀಕಿಸಿದ್ದಾರೆ.

ಆಧಾರ:ವಿಜಯಕರ್ನಾಟಕ, ದಿನಾಂಕ:19.09.2020